

# ಸಾಹಿತ್ಯ ಉತ್ಸವಗಳ ಸುತ್ತ...

ಸಾಹಿತ್ಯ ಸಮ್ಮೇಳನ, ಸಂಭ್ರಮ, ಉತ್ಸವಗಳು ಜನರಿಗೆ ಕೊಡುತ್ತಿರುವ ಪ್ರೇರಣೆಗಳು ಏನು, ಹುಟ್ಟಿಸುತ್ತಿರುವ ಉತ್ಸಾಹ ಯಾವ ಬಗೆಯದು? ಅದರಿಂದ ಜನರಿಗೆ ಭಾವನಾತ್ಮವಾಗಿ ಆಗುತ್ತಿರುವ ಲಾಭಗಳು ಏನು? ಎಂಬುದರ ಬಗ್ಗೆ 'ಸಾಹಿತ್ಯ ಉತ್ಸವಗಳ ಸುತ್ತ...' ಎಂಬ ಸಂಕಿರಣದಲ್ಲಿ ನಾಡಿನ ಚಿಂತನಶೀಲರು ವ್ಯಕ್ತಪಡಿಸಿದ ಪ್ರತಿಕ್ರಿಯೆಗಳು ಇಲ್ಲಿವೆ...

'ಸಾಹಿತ್ಯ'ವೆನ್ನುವ ಸಂಸ್ಥೆಯು ಹಲವು 'ಆಸಕ್ತ ಹಿತ'ಗಳಿಗೆ ಲಾಭದಾಯಕವಾದ ಉದ್ಯಮವಾದ ಬಳಿಕ, ಕನ್ನಡ ಸಂಸ್ಕೃತಿಯ ಹೆಸರಿನಲ್ಲಿ ಸಾರ್ವಜನಿಕರಿಗೆ ಸೇರಿದ ಕೋಟಿಗಟ್ಟಲೆ ಹಣವು ನಿರ್ಲಜ್ಜವಾಗಿ ದುಂದಾಗುತ್ತಿದೆ. ಈ ಅಪವ್ಯಯದಲ್ಲಿ ಸಮ್ಮೇಳನ, ಉತ್ಸವ, ಲಿಟರರಿ ಫೆಸ್ಟಿವಲ್ ಮತ್ತು ಸಂಭ್ರಮಗಳದು ಸಿಂಹಪಾಲು. ಏಕೆಂದರೆ ಅವು ನಿರ್ದಿಷ್ಟವಾದ ಸಾಧನೆಗಳನ್ನು ತೋರಿಸುವ ಜರೂರು ಇರುವುದಿಲ್ಲ. ಕರ್ನಾಟಕದ ಬಹುಸಂಖ್ಯಾತ ಜನಸಾಮಾನ್ಯರು ಮತ್ತು ಅಲ್ಪಸಂಖ್ಯಾತ ಸಾಹಿತ್ಯಾಸಕ್ತರು ಇದರಲ್ಲಿ ತೀವ್ರವಾದ ಅಸಕ್ತಿಯನ್ನು ತೋರಿಸುವುದಿಲ್ಲ. ತಮ್ಮ ಜೀವನ ಮತ್ತು ಓದಿಗೆ ಸಂಬಂಧಿಸಿದಂತೆ ಅವರು ಮಾಡಿಕೊಳ್ಳುವ ಆಯ್ಕೆಗಳು ಈ ಸಮ್ಮೇಳನಗಳಿಂದ ತೀರ್ಮಾನವಾಗುವುದಿಲ್ಲ. ಬಹುಮಟ್ಟಿಗೆ ಸಾಹಿತ್ಯದ ಗಂಧಗಾಳಿಯೂ ಇಲ್ಲದ ಸದಸ್ಯರಿಂದ ಚುನಾಯಿತರಾದ ಪದಾಧಿಕಾರಿಗಳ ಆದ್ಯತೆಗಳು ಸಾಹಿತ್ಯ ಮತ್ತು ಸಂಸ್ಕೃತಿಗಳ ನೆಲೆಯಲ್ಲಿ ಇರುವುದಿಲ್ಲ. ಇದ್ದರೂ ಅವು ಅವರ ತಿಳಿವಳಿಕೆಯ ಮಿತಿಯೊಳಗೆ